ಮೈಸೂರು ಗವರ್ನಮೆಂಟ್ ಕೋ ಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರ್‌ರವರ ಆಫೀಸ್, ಬೆಂಗಳೂರು.

ಸರ್‌ಕ್ಯುಲರ್ ನಂ. 369—Cs. 24, ತಾರೀಖು 11-12ನೆ ಜನವರಿ 1909ನೆ ಇಸವಿ.

ಮೈಸೂರು ಗವರ್ನಮೆಂಟ್ ಕೋ ಆಪರೇಟಿವ್ ಸೊಸೈಟಿಗಳ ರೆಗ್ಯುಲೇಷ್ನ ಅನುಸರಿಸಿ ರಿಜಿಸ್ಟರಾದ ಕೋ ಆಪರೇಟಿವ್ ಸೊಸೈಟಿಗಳು ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕುಗಳಲ್ಲಿ ಪಬ್ಲಿಕ್ ಅಕೌಂಟನ್ನು ಇಡಬಹುದೆಂದು ಇಂಡಿಯಾ ಗವರ್ನಮೆಂಟನವರು ಅಪ್ಪಣೆ ಮಾಡಿರುತ್ತಾರೆ. ಸದರಿ ಗವರ್ನಮೆಂಟನವರಿಂದ ಬದಲಾಯಿಸಲ್ಪಟ್ಟ ಪೋಸ್ಟ್ ಆಫಿಸ್ ಸೇವಿಂಗ್ಸ್ ಬ್ಯಾಂಕಿನ 42 (b)ನೆ ರೂಲು ಈ ಕೆಳಗೆ ವಿವರಿಸುವಂತೆ ಇರುತ್ತೆ :—

"ಇಂಡಿಯಾ ಕೋ ಆಪರೇಟಿವ್ ಕ್ರೆಡಿಟ್ ಸೊಸೈಟಿಗಳ ಆಕ್ಟ್ ಮತ್ತು ನೇಟಿವ್ ಸಂಸ್ಥಾನಗಳಲ್ಲಿ ಜಾರಿಯಲ್ಲಿರುವ ಅದೇ ಸಂಬಂಧವಾದ ಕಾನೂನು—ಇವುಗಳನ್ನನುಸರಿಸಿ ರಿಜಿಸ್ಟ್ರರು ಮಾಡಲ್ಪಡುವ ಸೊಸೈಟಿಗಳ ಸೆಕ್ರಿಟರಿಗಳು, ಖಜಾನ್ಚಿಯವರು, ಅಥವಾ ಮ್ಯಾನೇಜರುಗಳು ಹಣವನ್ನು ಡಿಪಾಜಿಟ್ ಇಡಬಹುದು."

2. ಸೊಸೈಟಿಗಳಿಗೆ ಪಬ್ಲಿಕ್ ಅಕೌಂಟನ್ನು ಪೋಸ್ಟಾಫೀಸ್ ಸೇವಿಂಗ್ಸ್ ಬ್ಯಾಂಕುಗಳಲ್ಲಿ ಇಡುವದರಿಂದ ಈ ಕೆಳಗೆ ನಮೂದಿಸಿರುವ ರಿಯಾಯತಿಗಳು ದೊರಿಯುವವು.

ಯಾವ ಸೊಸೈಟಿಯೇ ಆಗಲಿ ಯಾವಾಗಲೂ 10,000 ರೂಪಾಯಿಗೆ ಮಿಾರಿ ಡಿಪಾಜಿಟ್ಟು ಇಡಕೂಡದು, ಮತ್ತು 10,000 ರೂಪಾಯಿಗೆ ಮಿಾರಿದ ಮೊಬಲಗಿಗೆ ಬಡ್ಡಿ ದೊರಿಯುವದಿಲ್ಲ. ಡಿಪಾಜಿಟ್ಟನ್ನು ವಾಪಸು ತೆಗದುಕೊಳ್ಳಬೇಕಾದರೆ ಚಾಲ್ತಿ ಡಿಪಾಜಿಟ್ಟಿನಿಂದ ಮಾಹೆಯಾನಾ 1,000 ರೂಪಾಯಿಗೆ ಮಿಾರಿ ವಾಪಸು ಅಪೇಕ್ಷಿಸಕೂಡದು. ಆದರೆ ಇದಕ್ಕಿಂತಲೂ ಜಾಸ್ತಿ ಮೊಬಲಗು ವಾಪಸು ತೆಗೆಯಬೇಕಾದರೆ ಬಂದು ತಿಂಗಳಿಗೆ ಮುಂಚಿತವಾಗಿಯೇ ಪೋಸ್ಟ್ ಮಾಸ್ಟರಿಗೆ ಲಿಖಿತ ಮೂಲಕ ತಿಳಿಯಪಡಿಸಿ ಆ ರೀತಿ ತೆಗದುಕೊಳ್ಳಬಹುದು. ಎರಡು ಮೂರು ಸಲ ಕಿತ್ತಾ ವಾರಾಗಿ ಹಣವನ್ನು ಪೇಕ್ಷಿಸುವ ಪಕ್ಷದಲ್ಲಿ ಎಷ್ಟು ಕಿತ್ತಾ ಎಂಬುವದನ್ನೂ, ಯಾವ ತಾರೀಖುಗಳಲ್ಲಿ ಬೇಕಾಗುತ್ತೆಂಬುವದನ್ನೂ ನಮೂದಿಸಬೇಕು.

3. ಇಂಥ "ಪಬ್ಲಿಕ್ ಅಕೌಂಟನ್ನು" ಪೋಸ್ಟಾಫೀಸಿನ ಸೇವಿಂಗ್ಸ್ ಬ್ಯಾಂಕುಗಳಲ್ಲಿಡಲು ಅಪೇಕ್ಷಿಪಡುವ ಸೊಸೈಟಿಗಳು ಈ ಆಫೀಸು ಮೂಲಕ ಪೋಸ್ಟ್ ಮಾಸ್ಟರ್ ಜನರಲ್ ರವರಿಗೆ ಅದಕ್ಕಾಗಿರುವ ನಮೂನೆಯಲ್ಲಿ ದರಖಾಸ್ತು ಬರೆದುಕೊಳ್ಳಬಹುದು.

4. ಈ ಪಬ್ಲಿಕ್ ಅಕೌಂಟಿನ ವಿಷಯವಾಗಿ ಇನ್ನೂ ವಿಶೇಷ ತಿಳಿಯಬೇಕಾದರೆ ಪೋಸ್ಟಲ್ ಗೈಡು (ಏಪ್ರಿಲ್ 1908ನೆ ಇಸವಿ) 194-195ನೆ ಪುಟಗಳನ್ನು ನೋಡಬೇಕು.

ಎಂ. ಶ್ಯಾಮರಾವ್,
ಕೋ ಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರ್.

ಕೊಡಗು ಚೀಫ್ ಕಮಿಷನರವರಿಂದ ಕೊಡೋಣಾದ

ಇಸ್ತಿಹಾರ್‌ನಾಮೆ.

ದರಜಾಗಾ, ಬೆಂಗಳೂರು, ತಾರೀಖು 7ನೆ ಜನವರಿ 1909ನೆ ಇಸವಿ.

ನಂ. 7. ಈ ಮೂಲಕವಾಗಿ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಸ॥ 1909ನೆ ಇಸವಿ ಏಪ್ರಿಲ್ ತಾರೀಖು 1ರ ಲಾಗಾಯಿತು 1910ನೆ ಇಸವಿ ಮಾರ್ಚಿ ತಾರೀಖು 31ರ ವರಿವಿಗೆ ಕೊಡಗು ಸೀಮೆಯಲ್ಲಿ ಅಫೀಮನ್ನು, ಅಫೀಮಿನಿಂದ ತಯಾರಾದ ಅಥವಾ ಮಿಶ್ರವಾದ ಪದಾರ್ಥಗಳನ್ನು ಮತ್ತು ಹೊಗೆ ತೆಗಿಯುವದಕ್ಕೂ ಉಸ್ತರ ಉಪಯೋಗಿಸಲ್ಪಡುವ ಅಫೀಮಿನಿಂದ ತಯಾರಾದ ಅಥವಾ ಮಿಶ್ರವಾದ ಪದಾರ್ಥಗಳಲ್ಲದ ಕಸಕಸೆಯಿಂದ ತಯಾರಾದ ನಿಷಾ ವಸ್ತುಗಳನ್ನು ಚಿಲ್ಲರೆಯಾಗಿ ಮಾರುವದಕ್ಕೆ ಸ್ವಾತಂತ್ರ್ಯವನ್ನು ಈ ಕೆಳಗೆ ಕಾಣಿಸಿರುವ ವ್ಯಾರಿಗೆ ಪರಾಜು ಮಾಡಲ್ಪಡುವದು.

(i) 1909ನೆ ಇಸವಿ ಮಾರ್ಚಿ 12ನೆ ತಾರೀಖಿನಲ್ಲಿ ಮಡಿಕೆರೆಯಲ್ಲಿ ಮಡಿಕೆರೆ ತಾಲ್ಲೂಕು ಸುಬೇದಾರರ ಮುಂದೆ.

(ii) 1909ನೆ ಇಸವಿ ಮಾರ್ಚಿ 3ನೆ ತಾರೀಖಿನಲ್ಲಿ ವೀರರಾಜಪ್ಯಾಟೆಯಲ್ಲಿ ಎಡಿನಾಲ್ಕುನಾಡು ತಾಲ್ಲೂಕು ಸುಬೇದಾರರ ಮುಂದೆ.

(iii) 1909ನೆ ಇಸವಿ ಮಾರ್ಚಿ 7ನೆ ತಾರೀಖಿನಲ್ಲಿ ಗೋಣಿಕೊಪ್ಪಲಲ್ಲಿ ಕಿಗ್ಗಟ್ಟುನಾಡು ತಾಲ್ಲೂಕು ಸುಬೇದಾರರ ಮುಂದೆ.

2. ವಿಕ್ರಯವು ಕೊಡಗು ಕಮಿಷನರವರ ಮಂಜೂರಾತಿಗೆ ಒಳಪಟ್ಟಿರುತ್ತದೆ. ಅವರು ಯಾವಕಾರಣವೂ ನಮೂದಿಸದೆ ಚಿಡದರಖಾಸ್ತುದಾರನಿಗೆ ಲೈಸೆನ್ಸನ್ನು ತಿರಸ್ಕರಿಸಬಹುದು. ಹೆಂಗಸಿಗೆ ಲೈಸೆನ್ಸು ಕೊಡಲ್ಪಡುವದಿಲ್ಲ.

3. ತಾನು ಮೊದಲೇ ದರಖಾಸ್ತು ಮಾಡಿದ ಮೊಬಲಗನ್ನು ಕೊಟ್ಟಿದ್ದ ಪಕ್ಷದಲ್ಲಿ ಚೀಫ್ ಕಮಿಷನರವರಿಂದ ವಿಧಿಸೋಣಾದ ಫಾರಮಿನಲ್ಲಿ ಕಮಿಷನರವರಿಂದ ಮಂಜೂರಾದ ದರಖಾಸ್ತುದಾರನಿಗೆ ಲೈಸೆನ್ಸು ಕೊಡಲ್ಪಡುವದು.

4. ತೊಲ ಬಂದರ 4 ಆಣೆ ಮೇರೆ 80 ತೊಲದ ಸೇರಿಗೆ 20 ರೂಪಾಯಿ ವ್ಯಾರಿಗೆ ಕಮಿಷನರವರಿಂದ ಲೈಸೆನ್ಸುದಾರನಿಗೆ ಅಫೀಂ ಕೊಡಲ್ಪಡುತ್ತೆ.

5. ತೊಲ ಬಂದರ 9 ಆಣೆ ಮೇರೆ 80 ತೊಲದ ಸೇರಿಗೆ ಬಂದೇ ಬೆಲೆಯಾಗಿ 45 ರೂಪಾಯಿ ವ್ಯಾರಿಗೆ ಅಫೀಮನ್ನು ಲೈಸೆನ್ಸುದಾರನು ಜನಗಳಿಗೆ ಮಾರತಕ್ಕದ್ದು.

6. ಚಿಲ್ಲರೆಯಾಗಿ ಮಾರುವ ಅಂಗಡಿಗಳು ಮೂರೇ ಇರುವವು. ಅವು ಯಾವವೆಂದರೆ :—

ಮಡಿಕೇರಿಯಲ್ಲಿ ಬಂದು.
ವೀರರಾಜಪ್ಯಾಟೆಯಲ್ಲಿ ಬಂದು.
ಗೋಣಿಕೊಪ್ಪಲ್ಲಲ್ಲಿ ಬಂದು.

7. ಇನ್ನು ಹೆಚ್ಚಿಗೆ ಬೇಕಾಗುವ ತಪ್ಸೀಲುಗಳನ್ನು ಮಡಿಕೇರಿಯಲ್ಲಿ ಕೊಡಗು ಕಮಿಷನರವರಲ್ಲಿ ದರ್ಖಾಸ್ತು ಮಾಡಿ ತಿಳಿದುಕೊಳ್ಳಬಹುದು.

ಟಿ. ಬಿ. ಕೋಪ್‌ಲ್ಯಾಂಡ್,
ಚೀಫ್ ಕಮಿಷನರವರ ಸೆಕ್ರಿಟೆರಿಯವರು.